ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಮಂಜೂರಾತಿಗಾಗಿ ಸ್ವೀಕರಿಸಲಾದ ಅರ್ಜಿಗಳು.

660 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿವೇಶನಗಳ ಹಂಚಿಕೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸ್ವೀಕರಿಸಿರುವ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು?

ಆ) ಸರ್ಕಾರದಿಂದ ಮನೆ, ನಿವೇಶನಗಳನ್ನು ಹಂಚಲು ಪ್ರಸ್ತುತ ಯಾವುದಾದರೂ ಪ್ರಸ್ತಾವನೆ ಇದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಹಂಚಲಾಗುವುದು.

ಈ) ಸಾರ್ವಜನಿಕರು ಸಂದಾಯ ಮಾಡಿರುವ ಠೇವಣಿ ಹಣದ ಮೇಲೆ ಬಡ್ಡಿ ನೀಡುವುದನ್ನು ಸರ್ಕಾರವು ಪರಿಶೀಲಿಸುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) .:

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಕ್ಟೋಬರ್ 1988ರಲ್ಲಿ ವಿವಿಧ ವಿಸ್ತೀರ್ಣದ 3200 ನಿವೇಶನಗಳ ಹಂಚಿಕೆಗೆ ಅಧಿಸೂಚನೆ ಹೊರಡಿಸಲಾಗಿದ್ದು. ಇದಕ್ಕೆ ಎದಿರಾಗಿ ಸಾರ್ವಜನಿಕರಿಂದ 81,843 ಅರ್ಜಿಗಳನ್ನು ಸ್ವೀಕರಿಸಿದೆ. ಅಂಗವಾಗಿ 20 X 30 ಅಳತೆಯ 2000 ನಿವೇಶನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವ್ಯಕ್ತಿಗಳಿಗಾಗಿ ಪ್ರತ್ಯೇಕವಾಗಿ ಹಂಚಲು ಅಧಿಸೂಚಿಸಿದ್ದು ಇದಕ್ಕೆ ಎದಿರಾಗಿ 5,145 ಅರ್ಜಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸ್ವೀಕರಿಸಿದೆ.

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅರ್ಜಿದಾರರಿಗೆ ನಿವೇಶನ ಹಂಚಿಕೆ ಮಾಡುವುದು ಬಡಾವಣೆಗಳ ನಿವೇಶನಗಳ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಂಡ ಜಮೀನಿನ ದೊರೆಯುವಿಕೆಯ ಮೇಲೆ ಅವಲಂಬಿಸಿದೆ. ಭೂಸ್ವಾಧೀನ ಮಾಡಿಕೊಂಡ ಜಮೀನಿನ ಮೇಲೆ ದೊಡ್ಡ ಪ್ರಮಾಣದ ಒತ್ತುವರಿ ಹಾಗೂ ಬಾಕಿ ಇರುವ ನ್ಯಾಯಾಲಯದ ತಕರಾರುಗಳ ಕಾರಣದಿಂದ ಕಾಲಕಳೆದಂತೆ ಭೂಸ್ವಾಧೀನ ಪಡಿಸಿಕೊಳ್ಳುವುದು ಅತಿ ಕಷ್ಟಕರವಾಗಿದೆ, ಜಮಿನಿನ ದೊರೆಯುವಿಕೆಯ ಕುಸಿತದ ಕಾರಣಗಳಿಂದ ಸರ್ಕಾರವು ತನ್ನ ಹೊಸ ವಸತಿ ನೀತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಇಲ್ಲವೇ ಖಾಸಗಿಯವರಿಂದ ಸಾಮೂಹಿಕ ವಸತಿ ಯೋಜನೆ ಕೈಗೊಳ್ಳಲು ಅವಕಾಶ ಕಲ್ಪಿಸುವಿಕೆಗೆ ಹೆಚ್ಚಿನ ಒತ್ತು ಕೊಟ್ಟಿದೆ. ಈಗಿನ ಅಂದಾಜಿನಂತೆ ಲಭ್ಯವಿರುವ ಭೂ ಸ್ವಾಧೀನಪಡಿಸಿಕೊಂಡ ಜಮಿನಿನಲ್ಲಿ 1995-96ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 550 ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದೆ.

ಇ) "ಯಾವುದೇ ಲಾಭ ಆಥವಾ ನಷ್ಟ" ಎಲ್ಲರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸಾರ್ವಜನಿಕರ ಕ್ಷೇಮಾಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರು ಇಟ್ಟಿರುವ ಪ್ರಾರಂಭಿಕ ಠೇವಣಿಯ ಮೇಲೆ ಬಡ್ಡಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅಲ್ಲದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶನದ ಹಂಚಿಕೆ ನಿಯಮಗಳು 1984ರ ಅನ್ವಯ ಬಡ್ಡಿಯನ್ನು ನೀಡಲು ಅವಕಾಶವಿರುವುದಿಲ್ಲ.

ರಾಜ್ಯದಲ್ಲಿರುವ ಪೋಲೀಸ್ ಠಾಣೆಗಳ ಬಗ್ಗೆ.

664 - ಶ್ರೀ ಯು.ಆರ್. ಸಭಾಪತಿ(ಉಡುಪಿ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಪೋಲೀಸ್ ಠಾಣೆಗಳ ಸಂಖ್ಯೆ ಎಷ್ಟು?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪೋಲೀಸ್ ಠಾಣೆಗಳನ್ನು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸಿಬ್ಬಂದಿಗಳ ಕೊರತೆಯನ್ನು ನಿವಾರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಮಂತ್ರಿಗಳು):

ಅ) ರಾಜ್ಯದಲ್ಲಿರುವ ಒಟ್ಟು ಪೋಲೀಸ್ ಠಾಣೆಗಳ ಸಂಖ್ಯೆ : 748

ಆ) ದಕ್ಷಿಣ ಕನ್ನಡ ಜಿಲ್ಲೆಯ ಪೋಲೀಸ್ ಠಾಣೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮಣಿಪಾಲ್ ಲೇಕ್‌ವ್ಯೂ ಹೋಟೆಲಿ/ಬಾರ್ ಪರಿವಾನಿಗೆ.

651 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಉಡುಪಿ ತಾಲ್ಲೂಕಿನ ಮಣಿಪಾಲ್ ಲೇಕ್‌ವ್ಯೂ ಹೋಟೆಲಿಗೆ ಬಾರ್ ಪರವಾನಗಿ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ವಿಷಯದಲ್ಲಿ ಸಾರ್ವಜನಿಕರಿಂದ ಪರವಾನಗಿ ನೀಡಬಾರದೆಂದು ಮನವಿಗಳು ಸರ್ಕಾರಕ್ಕೆ ಬಂದಿದೆಯೇ?

ಇ) ಬಾರ್ ಪರವಾನಗಿಯನ್ನು ನವೀಕರಿಸಿ ಬೇಕಾದರೆ ಪೂಜಾ ಮಂದಿರದಿಂದ ಎಷ್ಟು ಮೀಟರ್ ಅಂತರದಲ್ಲಿ ಇರಬೇಕೆಂದು ನಿಯಮ ಇರುತ್ತದೆ.

ಈ) ಕೇವಲ 20 ಮೀಟರ್‌ನಷ್ಟು ಅಂತರದಲ್ಲಿ ಪೂಜಾ ಮಂದಿರವಿದ್ದರೂ ಪರವಾನಗಿ ನವೀಕರಿಸಲು ಕಾರಣಗಳೇನು ಹಾಗೂ ಕಾನೂನಿನ ಪ್ರಕಾರ ಪರವಾನಗಿಯನ್ನೂ ತಡೆ ಹಿಡಿಯಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ಹೌದು

ಆ) ಹೌದು

ಇ) ಕರ್ನಾಟಕ ಅಬಕಾರಿ ಸನ್ನದುಗಳ (ಸಾಮಾನ್ಯ ಷರತ್ತುಗಳು ನಿಯಾಮಾವಳಿ 1967ರ ನಿಯಮ 5ರ ಪ್ರಕಾರ ಆಕ್ಷೇಪಣಾ ಸ್ಥಳಗಳಾದ ಪೂಜಾ ಮಂದಿರ,ಮಠ, ಮಸೀದಿ, ಚರ್ಚ್ ಮತ್ತು ಶೈಕ್ಷಣಿಕ ಸ್ಥಳಗಳಿಗೂ 100 ಮಿಟರ್‌ಗಿಂತ ಹೆಚ್ಚಿನ ಅಂತರದಲ್ಲಿರಬೇಕಾಗಿದೆ.

ಈ) 20 ಮೀಟರ್ ಅಂತರದಲ್ಲಿ ಯಾರ ಮಂದಿರವೂ ಇರುವುದಿಲ್ಲ. ಆದ್ದರಿಂದ ನವೀಕರಿಸಲಾಗಿದೆ. ಪರವಾನಗಿಯನ್ನು ತಡೆಹಿಡಿಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮಾದಕ ದ್ರವ್ಯ ಅಪರಾಧದ ಪ್ರಕರಣಗಳು

669 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ 1994ನೇ ಡಿಸೆಂಬರ್ ತಿಂಗಳಿಂದ 1995ನೇ ಜೂನ್ ತಿಂಗಳ 30 ನೇ ತಾರೀಖಿನ ವರೆಗೆ ಎಷ್ಟು ಮಾದಕ ದ್ರವ್ಯ ಅಪರಾಧ ಪತ್ತೆಯಾಗಿದೆ.

ಆ) ಪತ್ತೆಯಾದ ಅಪರಾಧದಲ್ಲಿ ಎಷ್ಟು ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ.